# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 298 | Pages. 2 | Date: 19-10-2025, SUNDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 298 – ಪುಟಗಳು : 2 | 19-10-2025 ಭಾನುವಾರ | Ph: 8762954248 | ದರ : ₹1


# ಪ್ರಗತಿಗೆ ರಾಜ್ಯ ಸರ್ಕಾರ ಅಸಹಕಾರ: ಕೇಂದ್ರ ಸಚಿವ ಹೆಚ್‌ಡಿಕೆ

## ಈ ಸರ್ಕಾರಕ್ಕೆ ಜನರೇ ಬುದ್ಧಿ ಕಲಿಸುತ್ತಾರೆ | ವಿವಿಧ ದೇಗುಲಗಳಲ್ಲಿ ವಿಶೇಷ ಪೂಜೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಜಿಲ್ಲಾ ಕೇಂದ್ರದಲ್ಲಿ ದೇವೇಗೌಡರು, ರೇವಣ್ಣ ಅವರ ನೇತೃತ್ವದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ದೊಡ್ಡಮಟ್ಟದ ಅಭಿವೃದ್ಧಿ ಕಾಣುತ್ತಿದ್ದೇವೆ. ಇನ್ನೂ ಸಹ ಜಿಲ್ಲೆಗೆ ಬೃಹತ್ ಯೋಜನೆ ತರಬೇಕೆಂಬ ಅಭಿಲಾಷೆ ಇದೆ. ಆದರೆ ರಾಜ್ಯ ಸರ್ಕಾರದಿಂದ ಸಹಕಾರ ಸಿಗುತ್ತಿಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಹೊಳೆನರಸೀಪುರ ತಾಲ್ಲೂಕಿನ ವಿವಿಧ ದೇವಾಲಯಗಳಿಗೆ ಶನಿವಾರ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಅವರು ಮಾತನಾಡಿದರು.

ನಾನು ಕೇಂದ್ರದಿಂದ ಕಾರ್ಯಕ್ರಮಗಳನ್ನು ರೂಪಿಸಬೇಕೆಂದರೆ ರಾಜ್ಯದ ಸಹಕಾರ ಬೇಕು. ಭೂಮಿ, ಮೂಲಸೌಕರ್ಯ ಕೊಡಬೇಕು. ಹಾಲಿ ಸರ್ಕಾರದಿಂದ ಅದನ್ನು ನಿರೀಕ್ಷೆ ಮಾಡಲು ಆಗಲ್ಲ ಎಂದರು. ಎರಡು ವರ್ಷ ಈ ಸರ್ಕಾರದಿಂದ ಯಾವುದೇ ರೀತಿಯ ಸಹಕಾರ ಸಿಕ್ಕಿಲ್ಲ ಎಂದು ನಾನು ಹಲವಾರು ಬಾರಿ ಹೇಳಿದ್ದೇನೆ, ಸಂಘರ್ಷಗಳು ಬೇರೆ, ರಾಜಕಾರಣ ಮಾಡೋದು ಬೇರೆ.

ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ಎಲ್ಲರೂ ಕೈಜೋಡಿಸಿ ಕೆಲಸ ಮಾಡಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಹೊಳೆನರಸೀಪುರ ಮಾತ್ರ ಅಲ್ಲ, ಇಡೀ ರಾಜ್ಯದಲ್ಲಿ ದೇವೇಗೌಡರ ಕನಸನ್ನು ನನಸು ಮಾಡಲು ಆಗಲಿಲ್ಲ, ಅಧಿಕಾರ ಇದ್ದಿದ್ದು ಬಹಳ ಕಡಿಮೆ. ಬೇರೆ ಪಕ್ಷಗಳ ಸಹಕಾರದಿಂದ ಮುಖ್ಯಮಂತ್ರಿ ಆದೆ. ಆದರೆ ಹೆಚ್ಚು ಅವಧಿ ಆಡಳಿತ ನಡೆಸಲು ಆಗಲಿಲ್ಲ. ಆದರೂ ನನ್ನ ಇತಿ-ಮಿತಿಯೊಳಗೆ ದೇವೇಗೌಡರ ಆಸೆ, ಅವರ ಮನಸ್ಸಿಗೆ ತೃಪ್ತಿ ತರುವ ರೀತಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದು ಕೆಲಸ ಮಾಡಿದ್ದೇನೆ ಎಂಬ ಆತ್ಮತೃಪ್ತಿ ಇದೆ ಎಂದು ನುಡಿದರು.

ಈ ಸರ್ಕಾರದಲ್ಲಿ ರಾಜ್ಯದ ಅಭಿವೃದ್ಧಿಗಿಂತ ವಿರೋಧ ಪಕ್ಷಗಳನ್ನು ದಮನ ಮಾಡುವುದೇ ಆದ್ಯತೆಯಾಗಿದೆ. ಇದಕ್ಕೆ ಮುಂದಿನ ದಿನಗಳಲ್ಲಿ ಜನವೇ ಬುದ್ಧಿ ಕಲಿಸುವ ದಿನ ದೂರ ಇಲ್ಲ. ಆವತ್ತು ಅವರಿಗೆ ಪ್ರಾಯಶ್ಚಿತ್ತ ಆಗುತ್ತೆ ಎಂದು ಕುಮಾರಸ್ವಾಮಿ ಎಚ್ಚರಿಸಿದರು.

ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ಸರ್ಕಾರಿ ಜಾಗದಲ್ಲಿ ನಿಷೇಧ ವಿಚಾರ, ಸುಮ್ಮನೆ ಒಂದು ಕುಂಟು ನೆಪ, ರಾಜ್ಯದಲ್ಲಿ ಹಲವಾರು ಸಮಸ್ಯೆಗಳಿವೆ, ಜನರ ಬದುಕಿಗೆ ಏನು ಮಾಡಬೇಕು ಅದನ್ನು ಮಾಡುತ್ತಿಲ್ಲ, ಬದಲಾಗಿ ಬೇಡವಾದುದನ್ನು ಮಾಡುತ್ತಿದ್ದಾರೆ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಟೆಂಪಲ್ ರನ್: ಇದಕ್ಕೂ ಮುನ್ನ ಪತ್ನಿ ಅನಿತಾ ಹಾಗೂ ಸಹೋದರ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಮೊದಲಾದವರೊಂದಿಗೆ ತಮ್ಮೂರಿನ ದೇಗುಲಗಳಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ತಮ್ಮ ಕುಮಾರಸ್ವಾಮಿಗೆ, ಅಣ್ಣ ರೇವಣ್ಣ ಸಾಥ್ ನೀಡಿದರು.

ಮೊದಲು ಹೊಳೆನರಸೀಪುರ ಪಟ್ಟಣದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ, ಬಳಿಕ ಮಾವಿನಕೆರೆಯ ಬೆಟ್ಟದ ರಂಗನಾಥಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದ ಅರ್ಚನೆ ಮಾಡಿದರು. ಇದಕ್ಕೂ ಮುನ್ನ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯಕ್ಕೆ ಬಂದ ಹೆಚ್.ಡಿ.ಕೆ ಮೊದಲಾದವರನ್ನು ಅರ್ಚಕರ ತಂಡದವರು, ವೇದ ಮಂತ್ರ ಘೋಷಗಳೊಂದಿಗೆ ಪೂರ್ಣ ಕುಂಭ ಸ್ವಾಗತ ನೀಡಿ ಬರಮಾಡಿಕೊಂಡರು.

ಈ ವೇಳೆ ಹಲವು ತಿಂಗಳ ನಂತರ ಸ್ವಂತ ತಾಲೂಕಿಗೆ ಆಗಮಿಸಿದ ಹೆಚ್.ಡಿ.ಕೆ. ಅವರನ್ನು ಕಂಡು ಹರ್ಷಚಿತ್ತರಾದ ಅಭಿಮಾನಿಗಳು, ನೂರಾರು ಸಂಖ್ಯೆಯಲ್ಲಿ ಸೇರಿ ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು.

ಪುರಸಭೆ ಅಧ್ಯಕ್ಷ ಹೆಚ್.ಕೆ.ಪ್ರಸನ್ನ, ತಹಶೀಲ್ದಾರ್ ರೇಣುಕುಮಾರ್, ಪುರಸಭೆ ಮುಖ್ಯಾಧಿಕಾರಿ ಯು.ಎನ್.ಶಿವಶಂಕರ್, ಮಾಜಿ ಎಂಎಲ್ಸಿ ರಮೇಶ್ ಗೌಡ ಮೊದಲಾದವರಿದ್ದರು.

### ಸಹೋದರರ ಭಕ್ತಿಪೂರ್ವಕ ಪೂಜೆ

ಕೇಂದ್ರ ಸಚಿವರಾಗಿ ಕಾರ್ಯ ಒತ್ತಡದ ನಡುವೆ ಅನಾರೋಗ್ಯ ಹಿನ್ನೆಲೆ ಹಲವು ತಿಂಗಳುಗಳಿಂದ ಕುಮಾರಸ್ವಾಮಿ ತವರಿಗೆ ಬಂದಿರಲಿಲ್ಲ. ಬಂದರೂ ಹುಟ್ಟೂರಿನ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿರಲಿಲ್ಲ. ಮುಖ್ಯವಾಗಿ ಹೆಚ್ಡಿಕೆ-ಹೆಚ್ಡಿಆರ್ ಸಹೋದರರು ಕೆಲಹೊತ್ತು ಏಕಾಂತವಾಗಿ ಮಾತನಾಡಿರಲಿಲ್ಲ. ಆದರೆ ಶನಿವಾರ ಆರಂಭದಿಂದ ಕಡೆಯವರೆಗೂ ತಮ್ಮನ ಜೊತೆಯಲ್ಲೇ ಇದ್ದ ರೇವಣ್ಣ ಜೊತೆಯಾಗಿ ಪೂಜೆ ಸಲ್ಲಿಸಿದರು. ವಿಶೇಷವಾಗಿ ಕುಟುಂಬದ ಎಲ್ಲರ ಹೆಸರಲ್ಲಿ ಅರ್ಚನೆ ಮಾಡಿದರು. ಮನಸಾರೆ ಪ್ರಾರ್ಥಿಸಿದರು. ಒಳಿತು ಮಾಡು ದೇವರೇ ಎಂದು ಬೇಡಿಕೊಂಡರು. ಸಣ್ಣದನಿಯಲ್ಲಿ ಜೊತೆಯಾಗಿ, ಎದುರುಬದುರಾಗಿ ನಿಂತು ಮಾತನಾಡುತ್ತಾ ಪರಸ್ಪರ ಸಂತೈಸಿಕೊಂಡರು.

> ನಾವು ಬೆಳೆದಿರುವ ಹೊಳೆನರಸೀಪುರದ ದೇವಸ್ಥಾನ ಅತ್ಯಂತ ಪುರಾತನ ದೇವಸ್ಥಾನ. ಸಣ್ಣ ಕೃಷಿ ಕುಟುಂಬದಿಂದ ಬಂದು ದೇವೇಗೌಡರಂತಹ ರಾಜಕಾರಣಿ ಇದ್ದಾರೆ ಎಂದು ದೇಶದಲ್ಲಿ ಮಾತನಾಡುತ್ತಾರೆ ಎಂದರೆ ಅದು ದೇವರ ಇಚ್ಛೆ. ಆ ದೇವರ ಅನುಗ್ರಹದಿಂದಲೇ ಈ ರಾಜ್ಯವನ್ನು ಮೊದಲ ಸ್ಥಾನಕ್ಕೆ ತರಲು ನಮ್ಮ ಕೈಲಾದ ಕೊಡುಗೆ ನೀಡಲು, ಅಳಿಲು ಸೇವೆ ಸಲ್ಲಿಸಲು ಸಂಕಲ್ಪ ಇಟ್ಟುಕೊಂಡಿದ್ದೇನೆ.
>
> – ಹೆಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

# ಹಾಸನಾಂಬ ದರ್ಶನಕ್ಕೆ ಭಕ್ತರ ಸಂಖ್ಯೆ ಅಪಾರ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಶಕ್ತಿ ದೇವತೆ ಹಾಸನಾಂಬ ಹಾಗೂ ಸಿದ್ದೇಶ್ವರಸ್ವಾಮಿ ದರ್ಶನೋತ್ಸವಕ್ಕೆ ಶನಿವಾರ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬಂದರು.

ವಾರಾಂತ್ಯವಾದ್ದರಿಂದ ಜನರ ಸಂಖ್ಯೆ ಹೆಚ್ಚಿದೆಯಾದರೂ ಎಲ್ಲರಿಗೂ ಸುಗಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು. ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್, ಶಾಸಕ ವಿ. ಸುನಿಲ್ ಕುಮಾರ್, ಮಾಜಿ ಶಾಸಕ ಪ್ರೀತಂ ಗೌಡ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಸೇರಿ ಅನೇಕ ಗಣ್ಯರು ದೇವಿ ದರ್ಶನ ಪಡೆದರು.

ಶನಿವಾರ ಬೆಳಿಗ್ಗೆ ವರೆಗೆ 3.70 ಲಕ್ಷ ಜನ ಭಕ್ತಾದಿಗಳು ಹಾಸನಾಂಬ ತಾಯಿ ದರ್ಶನ ಪಡೆದಿದ್ದಾರೆ.

ದರ್ಶನಕ್ಕಾಗಿ ಸರಾಸರಿ 7 ರಿಂದ 9 ಗಂಟೆ ಕಾಲ ಜನರು ಸಾಲಿನಲ್ಲಿ ಕಾಯಬೇಕಾದ ಸ್ಥಿತಿ ಎದುರಾಗಿದೆ. ಈಗಲೂ ಜನ ಸಾಗರ ಹರಿದು ಬರುತ್ತಿರುವ ಕಾರಣ ದರ್ಶನದ ಅವಧಿ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಶನಿವಾರ ಮಧ್ಯಾಹ್ನ 2 ರಿಂದ 3.30 ರವರೆಗೆ ದೇವಿ ದರ್ಶನ ಇರಲಿಲ್ಲ. ಹಾಗೆಯೇ ರಾತ್ರಿ 12 ರಿಂದ ಭಾನುವಾರ ಬೆಳಿಗ್ಗೆ 6ರ ವರೆಗೆ ದೇವರ ದರ್ಶನ ಇರುವುದಿಲ್ಲ. ಭಾನುವಾರ ರಾತ್ರಿ 12 ಗಂಟೆಯಿಂದ ಸೋಮವಾರ ಬೆಳಿಗ್ಗೆ 6ರ ವರೆಗೆ ಶಾಸ್ತ್ರದ ಪ್ರಕಾರ ವಿಶೇಷ ಪೂಜೆ ಇರುವ ಕಾರಣ ದರ್ಶನ ಇರುವುದಿಲ್ಲ. ಹೀಗಾಗಿ ದರ್ಶನದ ಅವಧಿ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ಅಲ್ಲದೆ, ಮಳೆಯ ಸೂಚನೆಯೂ ಇದ್ದೂ ದೇವಾಲಯಕ್ಕೆ ಆಗಮಿಸುವ ಎಲ್ಲಾ ಭಕ್ತರೂ ಇಂತಹ ಸಂದರ್ಭಕ್ಕೆ ಪೂರ್ವ ತಯಾರಾಗಿ ಬರಬೇಕಾಗಿ ವಿನಂತಿದ್ದಾರೆ.

ಸಚಿವ ಕೃಷ್ಣ ಬೈರೇಗೌಡರು, ಶುಕ್ರವಾರ ಸಂಜೆಯಿಂದ ಶನಿವಾರ ಬೆಳಗ್ಗಿನ ಜಾವ 4 ಗಂಟೆವರೆಗೆ ರಾತ್ರಿ ಇಡೀ ಹಾಸನಾಂಬೆ ದೇವಾಲಯದಲ್ಲೇ ಠಿಕಾಣಿ ಹೂಡಿ ಸಾರ್ವಜನಿಕರಿಗೆ ಸುಗಮ ದರ್ಶನ ಮಾಡಿಸಿದರು.

ಶನಿವಾರ ಮತ್ತೆ ಬೆಳಗ್ಗೆ 7.30ಕ್ಕೆ ಫೀಲ್ಡ್‌ಗೆ ಇಳಿದಿದ್ದರು. ಜನರಿಗೆ ಸುಗಮ ದರ್ಶನದ ಜೊತೆಗೆ ಶೌಚಾಲಯಗಳ ನೈರ್ಮಲ್ಯದ ಕಡೆಗೂ ಗಮನ ಹರಿಸಿದರು. ಬಳಿಕ ಅವರೇ ಮುಂದೆ ನಿಂತು ಹಾಸನಾಂಬೆ ಗರ್ಭಗುಡಿ ಎದುರು ಜನಸಂದಣಿ ನಿಯಂತ್ರಿಸಿದರು.

# ಸಕಲೇಶಪುರ ತ್ಯಾಜ್ಯ ವಿಲೇವಾರಿ ಘಟಕ ಉದ್ಘಾಟನೆ ಮತ್ತೆ ಮುಂದೂಡಿಕೆ

## ರಾಜಕೀಯ ಮೇಲಾಟಕ್ಕೆ ಬಲಿಯಾಗುತ್ತಿರುವ ಘಟಕ | ಸಾರ್ವಜನಿಕರ ಬೇಸರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಸಕಲೇಶಪುರ: ಮಳಲಿ ಗ್ರಾಮದಲ್ಲಿ ನಿರ್ಮಾಣವಾಗಿರುವ ಪುರಸಭೆಯ ತ್ಯಾಜ್ಯ ವಿಲೇವಾರಿ ಘಟಕ ಅಧಿಕಾರಿಗಳ ಶಿಷ್ಟಾಚಾರ ನಿರ್ಲಕ್ಷ್ಯ ಹಾಗೂ ಕೆಲವರ ರಾಜಕೀಯ ಪಿತೂರಿಯಿಂದ ಉದ್ಘಾಟನೆಯಾಗಲಿಲ್ಲ.

ಒಂದೂವರೆ ದಶಕಗಳ ಹೋರಾಟದಿಂದ ತಾಲ್ಲೂಕಿನ ಮಳಲಿ ಗ್ರಾಮದಲ್ಲಿ ನಿರ್ಮಾಣಗೊಂಡಿರುವ ಪುರಸಭೆಯ ಘನತ್ಯಾಜ್ಯ ವಿಲೇವಾರಿ ಘಟಕ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಶಾಸಕ ಸಿಮೆಂಟ್ ಮಂಜು ಅವರಿಂದ ಉದ್ಘಾಟನೆಯಾಗಬೇಕಿತ್ತು. ಈ ನಿಟ್ಟಿನಲ್ಲಿ ಪುರಸಭೆಯ ಆಡಳಿತ ಎಲ್ಲಾ ಸಿದ್ಧತೆ ನಡೆಸಿ ತ್ಯಾಜ್ಯವಿಲೇವಾರಿ ಘಟಕದ ಪ್ರವೇಶ ದ್ವಾರವನ್ನು ಮಾವಿನ ಸೊಪ್ಪು, ಬಾಳೆ ಕಂದಿನಿಂದ ಅಲಂಕಾರ ಮಾಡಲಾಗಿತ್ತು. ಅಲ್ಲದೆ ಶಿಲಾನ್ಯಾಸಕ್ಕೆ ನಾಮಫಲಕದ ಕಲ್ಲನ್ನು ಸಹ ಇಡಲಾಗಿತ್ತು. ಆದರೆ ಶುಕ್ರವಾರ ಮುಂಜಾನೆ ನಡೆದ ನಾಟಕೀಯ ಬೆಳವಣಿಗೆಯಲ್ಲಿ ಶಿಷ್ಟಾಚಾರ ಉಲ್ಲಂಘನೆಯ ನೆಪದಲ್ಲಿ ಪುರಸಭಾ ಮುಖ್ಯಾಧಿಕಾರಿಗಳೇ ಖುದ್ದು ಉದ್ಘಾಟನೆಯನ್ನು ರದ್ದುಗೊಳಿಸಿದ್ದು ಸಾರ್ವಜನಿಕ ಚರ್ಚೆಗೆ ಗ್ರಾಸವಾಗಿದೆ.

ಶಾಸಕ ಸಿಮೆಂಟ್ ಮಂಜು ಅವರು ಘನತ್ಯಾಜ್ಯ ವಿಲೇವಾರಿ ಘಟಕದ ಉದ್ಘಾಟನೆಗೆ ಸುಮಾರು ಒಂದು ವಾರದ ಹಿಂದೆಯೆ ಮುಖ್ಯಾಧಿಕಾರಿಗಳಿಗೆ ಸಮಯ ಕೊಟ್ಟಿದ್ದರು. ಬಹುತೇಕ ಪುರಸಭಾ ಸದಸ್ಯರು ಉದ್ಘಾಟನೆಗೆ ಒಪ್ಪಿದ್ದು ಕೆಲವು ಬೆರಳೆಣಿಕೆಯಷ್ಟು ಸದಸ್ಯರಿಗೆ ಮಾತ್ರ ಉದ್ಘಾಟನೆ ಕುರಿತು ಅಸಮಾಧಾನವಿತ್ತು. ಈ ಹಿನ್ನೆಲೆಯಲ್ಲಿ ರಾತ್ರೋರಾತ್ರಿ ಕೆಲವರು ಸ್ಥಳೀಯ ಕೆಲವು ಮುಖಂಡರಿಂದ ಸಂಸದರ ಗಮನಕ್ಕೆ ತರದೆ ಶಿಷ್ಟಾಚಾರ ಉಲ್ಲಂಘನೆ ಮಾಡಿ ಹಾಸನಾಂಬ ಜಾತ್ರಾ ಮಹೋತ್ಸವದ ಸಮಯದಲ್ಲಿ ಕಸ ವಿಲೇವಾರಿ ಘಟಕವನ್ನು ಉದ್ಘಾಟನೆ ಮಾಡಲಾಗುತ್ತಿದೆ ಎಂದು ದೂರಿದ್ದರು. ಈ ಹಿನ್ನೆಲೆಯಲ್ಲಿ ಉದ್ಘಾಟನೆಯನ್ನು ರದ್ದುಮಾಡುವಂತೆ ಮುಖ್ಯಾಧಿಕಾರಿಗಳಿಗೆ ಉನ್ನತ ಅಧಿಕಾರಿಗಳಿಂದ ಕರೆ ಬಂದ ಹಿನ್ನೆಲೆಯಲ್ಲಿ ಪುರಸಭೆಯ ಮುಖ್ಯಾಧಿಕಾರಿ ಮಹೇಶ್ವರಪ್ಪ ತಾತ್ಕಾಲಿಕವಾಗಿ ಘನತ್ಯಾಜ್ಯ ವಿಲೇವಾರಿ ಘಟಕದ ಉದ್ಘಾಟನೆ ಮುಂದೂಡಿದರು.

### ವಾರದ ಮೊದಲೇ ಹೇಳಿತ್ತು

ಶಾಸಕರು ವಾರದ ಹಿಂದೆಯೆ ಉದ್ಘಾಟನೆಗೆ ಸಮಯ ನೀಡಿದ್ದು ಈ ಸಮಯದಲ್ಲಿ ಪುರಸಭೆಯ ಮುಖ್ಯಾಧಿಕಾರಿಗಳು ಉದ್ಘಾಟನೆ ಕುಸಿತು ಸಂಸದರು, ಜಿಲ್ಲಾಧಿಕಾರಿ ಹಾಗೂ ಇತರ ಉನ್ನತ ಅಧಿಕಾರಿಗಳ ಗಮನಕ್ಕೆ ತರುವ ಕೆಲಸ ಮಾಡಬೇಕಿತ್ತು. ಆದರೆ ಪುರಸಭಾ ಮುಖ್ಯಾಧಿಕಾರಿಗಳ ನಿರ್ಲಕ್ಷ್ಯ ಹಾಗೂ ಕೆಲವರ ರಾಜಕೀಯದಿಂದಾಗಿ ತಾಜ್ಯವಿಲೇವಾರಿ ಘಟಕದ ಲೋಕಾರ್ಪಣೆ ನೆರವೇರಲಿಲ್ಲ. ಹಾಲಿ ಪುರಸಭೆ ಜನಪ್ರತಿನಿಧಿಗಳ ಅಧಿಕಾರಾವಧಿ ನ. 3ಕ್ಕೆ ಅಂತ್ಯಗೊಳ್ಳಲಿದ್ದು ಇದೀಗ ದೀಪಾವಳಿ ಹಿನ್ನೆಲೆಯಲ್ಲಿ ಸತತ ರಜೆಗಳಿದ್ದು ಅಲ್ಲದೆ ಪುರಸಭಾ ಸಿಬ್ಬಂದಿ ಹಾಗೂ ಸದಸ್ಯರ ತಂಡ ಅಧ್ಯಯನ ಪ್ರವಾಸ ಕೈಗೊಳ್ಳುತ್ತಿದ್ದು ಹೀಗಾಗಿ ಶೀಘ್ರದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಲೋಕಾರ್ಪಣೆಯಾಗುವುದು ಅನುಮಾನವಾಗಿದೆ. ಪಟ್ಟಣದಲ್ಲಿ ಘನತ್ಯಾಜ್ಯ ವಿಲೇವಾರಿ ಸಮಸ್ಯೆ ಮಿತಿ ಮೀರಿದ್ದು ಈ ಹಿನ್ನೆಲೆಯಲ್ಲಿ ಶೀಘ್ರವಾಗಿ ಲೋಕಾರ್ಪಣೆಯಾಗಬೇಕಾಗಿದ್ದ ತ್ಯಾಜ್ಯ ವಿಲೇವಾರಿ ಘಟಕದ ಉದ್ಘಾಟನೆ ರಾಜಕೀಯ ಒತ್ತಡದಿಂದ ಮತ್ತಷ್ಟು ವಿಳಂಬವಾಗುತ್ತಿರುವುದು ಪಟ್ಟಣದ ಜನರ ಬೇಸರಕ್ಕೆ ಕಾರಣವಾಗಿದೆ.

# ಸಾರಿಗೆ ಬಸ್‌ಗಳಿಲ್ಲದೆ ವಿದ್ಯಾರ್ಥಿಗಳ ಪರದಾಟ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಹಾಸನಾಂಬ ಹಾಗೂ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಅಂಗವಾಗಿ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಬೇರೆ ಮಾರ್ಗಕ್ಕೆ ನಿಯೋಜಿಸಿದ್ದರಿಂದ ಶನಿವಾರ ಸಾರಿಗೆ ಬಸ್‌ಗಳಿಲ್ಲದೆ ಸಾರ್ವಜನಿಕರು ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳು ಪರದಾಡಬೇಕಾಯಿತು.

ಹಾಸನ ಹಾಗೂ ಚನ್ನರಾಯಪಟ್ಟಣ ಕಡೆಗೆ ಶನಿವಾರ ಬೆಳಿಗ್ಗೆ 10 ಗಂಟೆ ವರೆಗೆ ಬಸ್‌ಗಳಿಲ್ಲದೆ ತಾಲ್ಲೂಕಿನ ಹಿರೀಸಾವೆಯ ಶ್ರೀಕಂಠಯ್ಯ ವೃತ್ತದಲ್ಲಿ ವಿದ್ಯಾರ್ಥಿಗಳು, ನೌಕರರು ಹಾಗೂ ಸಾರ್ವಜನಿಕರು ಗಂಟೆಗಟ್ಟಲೇ ಕಾಯಬೇಕಾಯಿತು. ಹಿರೀಸಾವೆಯ ಶ್ರೀಕಂಠಯ್ಯ ವೃತ್ತದಿಂದ ಪ್ರತಿದಿನ ಸಾವಿರಾರು ವಿದ್ಯಾರ್ಥಿಗಳು, ನೂರಾರು ನೌಕರರು ಚನ್ನರಾಯಟಪಟ್ಟಣ, ಹಾಸನಕ್ಕೆ ಪ್ರಯಾಣ ಮಾಡುತ್ತಾರೆ. ಪ್ರತಿದಿನ 5 ನಿಮಿಷಕ್ಕೆ ಒಂದು ಬಸ್ ಹಾಸನ ಕಡೆಗೆ ಸಂಚರಿಸುತ್ತವೆ. ಆದರೆ ಶನಿವಾರ ಗಂಟೆಗಂಟಲ್ಲೇ ಕಾದರೂ ಬರಲಿಲ್ಲ. ಬೆಳಿಗ್ಗೆ 7ಕ್ಕೆ ನಿಲ್ದಾಣಕ್ಕೆ ಬಂದವರಿಗೆ 9 ಗಂಟೆಯಾದರು ಬಸ್ ಇಲ್ಲದ ಪರಿಣಾಮ ಪ್ರಾಥಮಿಕ, ಪ್ರೌಢಶಾಲಾ ವಿದ್ಯಾರ್ಥಿಗಳು ತರಗತಿಗಳಿಗೆ ಸಮಯಕ್ಕೆ ಸರಿಯಾಗಿ ಹಾಜರಾಗಲು ಸಾಧ್ಯವಾಗಲಿಲ್ಲ. ಕೆಲವರು ಆಟೋ ಮತ್ತು ಖಾಸಗಿ ವಾಹನಗಳಲ್ಲಿ ಪ್ರಯಾಣ ಮಾಡಿದರು.

ಬೆಳಿಗ್ಗೆ 9.30ರ ನಂತರ ಬಸ್‌ಗಳು ಬಂದವು. ಅವು ಸಹ ಪ್ರಯಾಣಿಕರಿಂದ ತುಂಬಿದ್ದವು. ನೂಕುನುಗ್ಗಲಿನಲ್ಲಿ ಕೆಲವರು ಬಸ್ ಹತ್ತಿದರೇ, ವೃದ್ಧರು, ರೋಗಿಗಳು ಹತ್ತಲಾಗದೆ ನಿಂತಲ್ಲೇ ನಿಲ್ಲಬೇಕಾಯಿತು.

# ಶಾಸಕರ ನೇತೃತ್ವದಲ್ಲಿ ಬಿಜೆಪಿ ಸೇರಿದ ಕಾಂಗ್ರೆಸ್ ಕಾರ್ಯಕರ್ತರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: ಪ್ರಧಾನಿ ನರೇಂದ್ರ ಮೋದಿ ಅವರ ಜನಪರ ಯೋಜನೆ ಹಾಗೂ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯ ಮೆಚ್ಚಿ ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರು ಬಿಜೆಪಿ ಸೇರ್ಪಡೆಯಾಗುತ್ತಿದ್ದಾರೆಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕಿನ ಕುರುಭತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಡ್ಲಹಳ್ಳಿ ಭಾಗದ ಹತ್ತಾರು ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರನ್ನು ಶನಿವಾರ ಬಿಜೆಪಿಗೆ ಬರಮಾಡಿಕೊಂಡು ಮಾತನಾಡಿ, ಕೇಂದ್ರ ಸರ್ಕಾರದ ಅಭಿವೃದ್ಧಿ ಕಾರ್ಯ ಹಾಗೂ ನರೇಂದ್ರ ಮೋದಿ ಅವರ ಪಾರದರ್ಶಕ ಆಡಳಿತವನ್ನು ಎಲ್ಲರೂ ಮೆಚ್ಚಿದ್ದಾರೆ. ಮಾಜಿ ಶಾಸಕ ಬಿ.ಬಿ. ಶಿವಪ್ಪ ಅವರು ರಾಷ್ಟ್ರ ಹಾಗೂ ರಾಜ್ಯಕಂಡ ಶ್ರೇಷ್ಠ ರಾಜಕಾರಣಿಯಾಗಿದ್ದರು.

ನಿಷ್ಕಳಂಕ, ಪ್ರಾಮಾಣಿಕ, ಜಾತಿ ವರ್ಗವನ್ನು ಮೀರಿದ ಅವರ ಆದರ್ಶ ಪಾಲನೆಯಾಗಬೇಕು. ಮಾದರಿ ಕ್ಷೇತ್ರವನ್ನಾಗಿ ನಿರ್ಮಾಣ ಮಾಡುವ ಕನಸನ್ನು ಶಿವಪ್ಪ ಅವರು ಕಂಡಿದ್ದರು. ಈ ನಿಟ್ಟಿನಲ್ಲಿ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

ತಾಲ್ಲೂಕು ಬಿಜೆಪಿ ಅಧ್ಯಕ್ಷ ವಳಲಹಳ್ಳಿ ಅಶ್ವಥ್ ಮಾತಾನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದರೂ ಸಹ ತಾಲ್ಲೂಕು ಅಭಿವೃದ್ಧಿಗಾಗಿ ಶಾಸಕರು ಹಗಲಿರುಳು ಶ್ರಮಿಸುತ್ತಿದ್ದಾರೆ. ಶಾಸಕರ ಕೈ ಬಲಪಡಿಸುವ ಸದುದ್ದೇಶದಿಂದ ತಾಲ್ಲೂಕಿನಾದ್ಯಂತ ವಿವಿಧ ಪಕ್ಷಗಳಿಂದ ಬಿಜೆಪಿಗೆ ಪಕ್ಷಕ್ಕೆ ಸೇರ್ಪಡೆಯಾಗುತ್ತಿರುವುದು ಸಂತೋಷದ ವಿಷಯವಾಗಿದೆ.

ಇನ್ನೂ ಕೆಲವು ತಿಂಗಳಲ್ಲಿ ಗ್ರಾಮ ಪಂಚಾಯಿತಿ, ಜಿಪಂ ಮತ್ತು ತಾಪಂ ಚುನಾವಣೆ ನಡೆಯಲಿದ್ದು ಕಾರ್ಯಕರ್ತರು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ಎಲ್ಲರೂ ತಮಗೆ ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದರೆ ಪಕ್ಷ ಸುಲಭವಾಗಿ ಅಧಿಕಾರಕ್ಕೆ ಬರಲಿದೆ ಎಂದರು.

ಬಿಜೆಪಿ ತಾಲ್ಲೂಕು ಮಾಜಿ ಅಧ್ಯಕ್ಷ ಪ್ರತಾಪ್, ಪ್ರಧಾನ ಕಾರ್ಯದರ್ಶಿಗಳಾದ ಅಗ್ನಿ ಸೋಮಶೇಖರ್, ಮಧು ಬೊಮ್ಮನಕೆರೆ, ಬಿಜೆಪಿ ಮುಖಂಡರಾದ ಧರಣೇಶ್ ಇತರರಿದ್ದರು.

# ಹಾಸನದ ಅಂಬೇಡ್ಕರ್ ಭವನದಲ್ಲಿ ಸಿಐಟಿಯು ರಾಜ್ಯ ಸಮ್ಮೇಳನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ನ. 13 ರಿಂದ 15ರ ವರೆಗೆ ಸಿಐಟಿಯು 16ನೇ ರಾಜ್ಯ ಸಮ್ಮೇಳನ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜರುಗಲಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಸಿಐಟಿಯು ಅಖಿಲ ಭಾರತ ಅಧ್ಯಕ್ಷ ಡಾ.ಹೇಮಲತಾ ಉದ್ಘಾಟಿಸಲಿದ್ದಾರೆ. ಅಖಿಲ ಭಾರತ ಕಾರ್ಯದರ್ಶಿ ಕೆ.ಎನ್.ಉಮೇಶ್ ಭಾಗವಹಿಸಲಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಆಯ್ದ 450 ಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಕಳೆದ 10 ವರ್ಷಗಳ ಅವಧಿಯಲ್ಲಿ ಸಾಮಾನ್ಯ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಭಾರತ ಯಾರ ಜೊತೆಗೆ ವ್ಯಾಪಾರ ಮಾಡಬೇಕು ಎಂಬುದನ್ನು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತೀರ್ಮಾನಿಸುವಂತಾಗಿದೆ. ನಮ್ಮ ಪ್ರಧಾನಿ ಜಾಗತಿಕವಾಗಿ ದುರ್ಬಲರಾಗಿದ್ದಾರೆಂದರು.

ಭಾರತದಲ್ಲಿ ಹೈನುಗಾರಿಕೆ ಸೇರಿ ಇತರೆ ಕೃಷಿ ಉತ್ಪನ್ನಗಳ ಮೇಲೆ ತೀವ್ರತರ ದಾಳಿ ಆರಂಭವಾಗಿ, ಇವುಗಳ ಮೇಲೆ ಅವಲಂಬಿತವಾಗಿರುವ ಗ್ರಾಮೀಣ ಉದ್ಯೋಗ ಕುಸಿದು, ನಿರುದ್ಯೋಗ ಪ್ರಮಾಣ ಹೆಚ್ಚಾಗುತ್ತಿದೆ ಎಂದರು.

ದೇಶದ ಕೃಷಿ ಬಿಕ್ಕಟ್ಟಿಗೆ ಸಿಲುಕಿದ್ದು ಅವೈಜ್ಞಾನಿಕ ಭೂಸ್ವಾಧೀನದಿಂದಾಗಿ ಕೃಷಿ ನಂಬಿರುವ ರೈತರು ಮತ್ತು ಕೃಷಿ ಕೂಲಿಕಾರರನ್ನು ಗ್ರಾಮೀಣ ಪ್ರದೇಶದಿಂದ ಒಕ್ಕಲೆಬ್ಬಿಸಲಾಗುತ್ತಿದೆ. ಕಾರ್ಯ ಉದ್ಯೋಗ ಸೃಷ್ಟಿಯಾಗುತ್ತಿಲ್ಲ. ಇದರಿಂದ ದೇಶದಲ್ಲಿ ಬಡತನ ಹೆಚ್ಚಳವಾಗುತ್ತಿದ್ದು ನಿರುದ್ಯೋಗ ಪ್ರಮಾಣ ತೀವ್ರವಾಗುತ್ತಿದೆ ಎಂದು ಆತಂಕ ಹೊರ ಹಾಕಿದರು. ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ಉಪಾಧ್ಯಕ್ಷ ಜಿ.ಪಿ.ಸತ್ಯನಾರಾಯಣ, ಖಜಾಂಚಿ ಅರವಿಂದ ಇದ್ದರು.

# ಕಣ್ಮನ ಸೆಳೆಯುತ್ತಿದೆ ಫಲಪುಷ್ಪ ಪ್ರದರ್ಶನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಹಾಸನಾಂಬ ಹಾಗೂ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಅಂಗವಾಗಿ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಅ. 17 ರಂದು ಆರಂಭವಾದ ಫಲಪುಷ್ಪ ಪ್ರದರ್ಶನ ಅ. 20ರ ವರೆಗೆ ಇರಲಿದೆ. ಒಂದೇ ದಿನಕ್ಕೆ ಹತ್ತು ಸಾವಿರಕ್ಕೂ ಅಧಿಕ ಜನರು ಭೇಟಿ ನೀಡಿರುವುದು ಕಾರ್ಯಕ್ರಮಕ್ಕೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ.

ಯಶಸ್ವಿಗೊಳಿಸಲು ಸಿಇಒ ಮನವಿ:

ಜಾತ್ರೆಗೆ ಆಗಮಿಸುವ ಜನತೆ ಹಾಸನಾಂಬ ದರ್ಶನವನ್ನು ಮುಗಿಸಿ ತದನಂತರ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಿ ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಕೋರಿದರು.

ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಹಾಸನಾಂಬ ದೇವಾಲಯದ ಗೋಪುರ, ಗರುಡಗಂಬ, ದೀಪ, ಸ್ವಸ್ತಿಕ್ ಮತ್ತು ಟೈಯರ್, ಸೈಕಲ್, ವಾಹನಗಳು, ಸ್ಕೂಟರ್, ಬಾಟಲ್‌ಗಳಂತಹ ಹಳೆ ಉಪಕರಣಗಳನ್ನು ಉಪಯೋಗಿಸಿ ಒಂದೊಂದು ರೀತಿಯ ಪರಿಕಲ್ಪನೆಗಳಲ್ಲಿ ಪ್ರಕೃತಿ ಹಾಳು ಮಾಡದ ಹಾಗೆ ಯಾವ ರೀತಿಯಲ್ಲಿ ಉಳಿಸಿಕೊಳ್ಳಬೇಕು ಮತ್ತು ಇರುವ ವಸ್ತುಗಳನ್ನು ಹೇಗೆ ಬಳಸಬೇಕು ಎನ್ನುವುದರ ಕುರಿತು ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಹೇಮಾವತಿ ತೋಟಗಾರಿಕೆ ಸಂಘದ ಉಪಾಧ್ಯಕ್ಷರಾದ ಸುಜಾತ ನಾರಾಯಣ್, ತೋಟಗಾರಿಕೆ ಉಪನಿರ್ದೇಶಕರು ಹಾಗೂ ಹೇಮಾವತಿ ತೋಟಗಾರಿಕೆ ಸಂಘದ ನಿರ್ದೇಶಕರಾದ ಯೋಗೇಶ್ ಹೆಚ್.ಆರ್, ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರಾದ ಸೀಮಾ, ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಪವಿತ್ರ ಜಿ.ಎನ್ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ತೋಟಗಾರಿಕೆ ಇಲಾಖೆಯ ವತಿಯಿಂದ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಬೆಳೆದಿರುವ ಬೆಳೆಗಳನ್ನು ಪ್ರದರ್ಶಿಸಲಾಗಿತ್ತು. ವಿವಿಧ ಇಲಾಖೆಯ ಮಳಿಗೆಗಳು ಹಾಗೂ ತಿಂಡಿ-ತಿನಿಸುಗಳು ಸೇರಿದಂತೆ ಅನೇಕ ವಿಧವಾದ ಮಳಿಗೆಗಳನ್ನು ಹಾಕಲಾಗಿದೆ.

ಜಿಲ್ಲೆಯಲ್ಲಿ ತೆಂಗು ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ರೈತರ ಆರ್ಥಿಕತೆಯ ಮೂಲಾಧಾರವಾಗಿದೆ. ಇತ್ತೀಚೆಗೆ ಹಲವು ರೋಗ ಕೀಟ ಬಾಧೆಯಿಂದ ತೆಂಗಿನಲ್ಲಿ ಇಳುವರಿ ಕುಂಠಿಗೊಳ್ಳುತ್ತಿದ್ದು, ರೈತರು ಸಂಕಷ್ಟದಲ್ಲಿರುತ್ತಾರೆ. ಅದರಂತೆ ತೆಂಗು ಬೆಳೆಯಲ್ಲಿ ರೋಗ/ಕೀಟ ನಿರ್ವಹಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿಯನ್ನು ಸಹ ನೀಡಲಾಗಿದೆ.

ನೈಸರ್ಗಿಕ ಸಂಪನ್ಮೂಲಗಳಾದ ಭೂಮಾತೆ, ಸೂರ್ಯ,ಹೇಮಾವತಿ, ನೀರಿನ ಜರಿಗಳನ್ನು ವಿವಿಧ ಬಗೆಯ ಬಣ್ಣ ಬಣ್ಣದ ಹೂಗಳಿಂದ ಸಿಂಗರಿಸಿ ಪ್ರದರ್ಶಿಸಲಾಗಿದೆ. ಶ್ರೇಷ್ಠ ಕವಿಗಳು, ಪ್ರಸಿದ್ಧ ರಾಜಕಾರಣಿಗಳ ಭಾವಚಿತ್ರವನ್ನು ತರಕಾರಿ ಕೆತ್ತನೆಯ ಮೂಲಕ ಪ್ರದರ್ಶಿಸಲಾಗಿದೆ.. ಜೊತೆಗೆ ರಾಧಾ-ಕೃಷ್ಣ, ಬಲರಾಮ, ಬಾತುಕೋಳಿಗಳನ್ನು ವಿವಿಧ ಬಗೆಯ ಹೂವುಗಳಿಂದ ಅಲಂಕರಿಸಿ ಪ್ರದರ್ಶಿಸಿರುವುದು ನೋಡುಗರ ಕಣ್ಮನ ಸೆಳೆಯುತ್ತಿದೆ.

# ಬಾಳ್ಳುಪೇಟೆಯಲ್ಲಿ ನ. 27ಕ್ಕೆ ನುಡಿ ಹಬ್ಬ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲ್ಲೂಕಿನ ಬಾಳ್ಳುಪೇಟೆಯ ಸಿದ್ದಣ್ಣಯ್ಯ ಶಾಲಾ ಆವರಣದಲ್ಲಿ ಹೊಯ್ಸಳ ಕನ್ನಡ ಸೇನೆಯಿಂದ ನ. 27 ರಂದು ಸಾಮೂಹಿಕ ವಿವಾಹ, ಕ್ರೀಡೆ, ಉಚಿತ ಆರೋಗ್ಯ ತಪಾಸಣೆ ಮತ್ತು ಸಾಂಸ್ಕೃತಿಕ ಮಹೋತ್ಸವ ನಡೆಯಲಿದೆ ಎಂದು ಸಂಘಟನೆ ಮುಖಂಡ ಕಿಶೋರ್ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನ. 27ರ ಗುರುವಾರ ಬಾಳ್ಳುಪೇಟೆಯ ಸಿದ್ದಣ್ಣಯ್ಯ ಪ್ರೌಢಶಾಲೆ ಕ್ರೀಡಾಂಗಣದಲ್ಲಿ ಸಾಮೂಹಿಕ ವಿವಾಹ, ಉಚಿತ ಆರೋಗ್ಯ ತಪಾಸಣೆ, ಕ್ರೀಡೆ ಮತ್ತು ಸಾಂಸ್ಕೃತಿಕ ಮಹೋತ್ಸವ ನಡೆಯಲಿದೆ ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ಕನ್ನಡ ರಥ ಮೆರವಣಿಗೆ, ಸ್ಥಳೀಯ ಸಾಧಕರಿಗೆ ಗೌರವ ಸನ್ಮಾನ, ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಸುಗಮ ಸಂಗೀತ ಸಂಜೆ ಹಾಗೂ ನ. 1 ರಂದು ಬೆಳಗೊಡು ಹೋಬಳಿಯಾದ್ಯಂತ ಬೈಕ್ ರ್ಯಾಲಿ, ಶಾಲಾ ಮಕ್ಕಳಿಗೆ 7 ರಂದು ರಸ ಪ್ರಶ್ನೆ ಹಾಗೂ ಮಹಿಳಾ ಕ್ರೀಡಾಕೂಟ , ನ. 15 ಮತ್ತು 16 ರಂದು ಪುರುಷರಿಗೆ ಕ್ರಿಕೆಟ್ ಕ್ರೀಡಾಕೂಟಗಳನ್ನು ಏರ್ಪಡಿಸಿದೆ.

ಜನಸಾಮಾನ್ಯರಲ್ಲಿ ಕನ್ನಡದ ಬಗ್ಗೆ ಜಾಗೃತಿ ನಮ್ಮ ಸಂಸ್ಕೃತಿ, ಶಿಕ್ಷಣ ಹಾಗೂ ಕೃಷಿ ಕ್ಷೇತ್ರದಲ್ಲಿ ಪ್ರೇರಣೆಯನ್ನು ಉಂಟುಮಾಡುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದೆ. ಸಾಮೂಹಿಕ ವಿವಾಹದಲ್ಲಿ ವರನಿಗೆ ವಸ್ತ್ರ ವಧುವಿಗೆ ವಸ್ತ್ರದ ಜೊತೆಗೆ ಎರಡು ಗ್ರಾಂ ಚಿನ್ನದ ಮಾಂಗಲ್ಯವನ್ನು ಒದಗಿಸಿ ಕೊಡಲಾಗುವುದು. ಸಾಮೂಹಿಕ ವಿವಾಹ ಆಗುವವರು ಕಾರ್ಯಕ್ರಮ ನಡೆಯುವ ದಿನಾಂಕದ ಹತ್ತು ದಿನ ಮೊದಲು ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಯಶ್ವಂತ್, ಉದೀಶ್, ವಿಕ್ರಂ, ಉಬೈದ್, ಹರ್ಷ ,ನಂದೀಶ್ ಉಪಸ್ಥಿತರಿದ್ದರು.

# ಅಕ್ರಮ ವಲಸಿಗರ ಗುರುತಿಸಿ ಕಾನೂನು ಕ್ರಮಕ್ಕೆ ಆಗ್ರಹ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ದೇಶದ ಭದ್ರತೆಗೆ ಆತಂಕವಾಗಿರುವ ಅಕ್ರಮ ಬಾಂಗ್ಲಾ ನುಸುಳುಕೋರರ ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ತಾಲ್ಲೂಕು ಬಜರಂಗದಳ ಹಾಗೂ ವಿಶ್ವ ಹಿಂದು ಪರಿಷತ್ ವತಿಯಿಂದ ಉಪವಿಭಾಗಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು.

ತಾಲ್ಲೂಕು ಸಂಯೋಜಕ ವಿಷ್ಣುರಾವ್, ತಾಲ್ಲೂಕಿನಲ್ಲಿ ಅಸ್ಸಾಂ ಮೂಲದ ಕೆಲವರು ಬಾಡಿಗೆ ಮನೆಗಳಲ್ಲಿ ವಾಸವಿದ್ದು, ವಿವಿಧ ಕೂಲಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇವರ ರಾತ್ರಿ ಓಡಾಟ, ಗುಂಪುಗಾರಿಕೆ, ಹೊಡೆದಾಟ ಹಾಗೂ ಅನಾವಶ್ಯಕ ಕೂಗಾಟಗಳಿಂದ ಸ್ಥಳೀಯರು ಆತಂಕಕ್ಕೆ ಒಳಗಾಗಿದ್ದಾರೆ ಎಂದು ಹೇಳಿದರು. ಇತ್ತೀಚಿನ ಹಲವು ಕಳ್ಳತನ ಹಾಗೂ ಅಪರಾಧ ಪ್ರಕರಣಗಳಲ್ಲಿ ಇವರ ಪಾಲ್ಗೊಳ್ಳುವಿಕೆ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆ ಹಾಗೂ ಜನರ ಭದ್ರತೆಗಾಗಿ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕಾಫಿ ತೋಟಗಳು ಹಾಗೂ ಇತರ ಜಾಗಗಳಲ್ಲಿ ಕೆಲಸ ಮಾಡುತ್ತಿರುವ ವಲಸೆ ಕಾರ್ಮಿಕರ ಗುರುತಿನ ದಾಖಲೆಗಳನ್ನು ಪರಿಶೀಲಿಸಿ, ದಾಖಲೆರಹಿತರನ್ನು ವಶಕ್ಕೆ ಪಡೆದು ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಶೀಘ್ರ ಕ್ರಮ ಕೈಗೊಳ್ಳದಿದ್ದರೆ ಬಜರಂಗದಳ ಹಾಗೂ ವಿಶ್ವ ಹಿಂದು ಪರಿಷತ್ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ ಎಂದು ಎಚ್ಚರಿಸಿದರು. ವಿಶ್ವ ಹಿಂದು ಪರಿಷತ್ ಮುಖಂಡ ಬಾಲಕೃಷ್ಣ, ಜಿಲ್ಲಾ ಮುಖಂಡ ರಘು ಪ್ರಸಾದ್, ನಗರ ಅಧ್ಯಕ್ಷ ಮಹೇಂದ್ರ ಕುಮಾರ್, ನಗರ ಸಂಯೋಜಕ ಸುಜನ್ ಗೌಡ, ಬಿಜೆಪಿ ನಗರ ಅಧ್ಯಕ್ಷ ಲೋಕೇಶ್, ಆರ್‌ಎಸ್ಎಸ್ ಮುಖಂಡ ನಂದನ್, ಸನಾತನ ಸೇವಾ ಟ್ರಸ್ಟ್ ಬಾಲರಾಜ್, ರಘುಗೌಡ, ವಕೀಲ ಸುದೀಶ್ ಹಾಗೂ ಇತರರು ಉಪಸ್ಥಿತರಿದ್ದರು.

# ಒಳಚರಂಡಿ ಕಾಮಗಾರಿಗೆ 114 ಕೋಟಿ ರೂ. ವೆಚ್ಚದ ಪ್ರಸ್ತಾವನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ಪಟ್ಟಣದ ಪುರಸಭಾ ವ್ಯಾಪ್ತಿಯ 23 ವಾರ್ಡ್‌ಗಳಲ್ಲಿ ಒಳಚರಂಡಿ ಸಮರ್ಪಕಗೊಳಿಸಲು 114 ಕೋಟಿ ರೂ. ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಶಾಸಕ ಎಚ್.ಡಿ.ರೇವಣ್ಣ ತಿಳಿಸಿದರು.

ಪಟ್ಟಣದ ಪುರಸಭಾ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ತಿಳಿಸಿದ ಅವರು, 3 ದಶಕಗಳ ಹಿಂದೆ ಅಂದಿನ ವಸತಿ ಸಂಖ್ಯೆಗೆ ಅನುಗುಣವಾಗಿ ಒಳಚರಂಡಿ ನಿರ್ಮಾಣ ಕಾಮಗಾರಿ ನಡೆಸಲಾಗಿತ್ತು. ಇದೀಗ ಪುನರ್ ನಿರ್ಮಾಣ ಕಾಮಗಾರಿ ಅಗತ್ಯವಿರುವ ಬಗ್ಗೆ ಪ್ರಸ್ತಾವನೆಯಲ್ಲಿ ಮನವರಿಕೆ ಮಾಡಿಕೊಡಲಾಗಿದೆ ಎಂದರು.

ವಾರದ ಸಂತೆ ಸುಂಕ ರದ್ದುಗೊಳಿಸಿ ಸರ್ವ ಸದಸ್ಯರ ಒಪ್ಪಿಗೆ ಮೇರೆಗೆ ಜಿಲ್ಲಾಧಿಕಾರಿ ಅನುಮತಿ ಕೋರಿ ಮನವಿ ಸಲ್ಲಿಸಲಾಗಿತ್ತು. ಈಗ ರದ್ದುಗೊಳಿಸುವ ವಿಚಾರ ಪ್ರಸ್ತಾಪ ತಿರಸ್ಕಾರವಾಗಿದೆ. ರೈತರು ಮತ್ತು ಬದಿ ಬದಿ ವ್ಯಾಪಾರಸ್ಥರಿಗೆ ಆರ್ಥಿಕ ಹೊರೆಯಾಗದಂತೆ ಕ್ರಮ ವಹಿಸುವ ವಿಚಾರ ಕಾನೂನಾತ್ಮಕ ನಡೆ ಅನುಸರಿಸುವಂತೆ ಮುಖ್ಯಾಧಿಕಾರಿಗೆ ಸೂಚಿಸಲಾಯಿತು. ಪುರಸಭಾ ವಾಣಿಜ್ಯ ಮಳಿಗೆಗಳು ಹಲವು ಶಿಥಿಲಾವಸ್ಥೆಯಲ್ಲಿವೆ. ಅವುಗಳ ದುರಸ್ಥಿ ಬಗ್ಗೆ ಸದಸ್ಯರು ಗಮನ ಸೆಳೆದರು. ಅದರಿಂದ ದುರಸ್ಥಿ ಕಾರ್ಯ ನಡೆಸುವಂತೆ ಶಾಸಕರು ಅಧಿಕಾರಿಗಳಿಗೆ ಸಲಹೆ ನೀಡಿದರು. ಹರಾಜಿನಲ್ಲಿ ಮಳಿಗೆ ಪಡೆದು ಬಾಡಿಗೆ ಹಣ ಕಟ್ಟಲು ಸತಾಯಿಸುವ ವರ್ತಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮುಖ್ಯಾಧಿಕಾರಿ ಶಿವಶಂಕರ್ ಮತ್ತು ಬಾಡಿಗೆ ವಸೂಲಿದಾರನಿಗೆ ಸೂಚನೆ ನೀಡಿದರು. ಬೀದಿ ನಾಯಿಗಳ ಉಪಟಳ ಮತ್ತು ಅವುಗಳ ನಿಯಂತ್ರಣಕ್ಕೆ ಕ್ರಮದ ವಿಚಾರ ಕುರಿತು ಸದಸ್ಯೆ ಸುಧಾ ನಳಿನಿ ಗಮನಕ್ಕೆ ತಂದರು. ಗೋವಾ ಪ್ರವಾಸ ಕೈಗೊಳ್ಳುವ ಮೂಲಕ ಸದಸ್ಯರು ಕಾನೂನಾತ್ಮಕವಾಗಿ ಪರಿಹಾರ ಕಂಡು ಕ್ರಮ ಅನುಸರಿಸುವಂತೆ ಸಭೆಯಲ್ಲಿ ತೀರ್ಮಾನಿಸಿದರು. ಪಟ್ಟಣವನ್ನು ಸ್ವಚ್ಛವಾಗಿಡುವಲ್ಲಿ ಶ್ರಮ ವಹಿಸುತ್ತಿರುವ ಪೌರ ಕಾರ್ಮಿಕರ ಹಿತ ಬಯಸುವುದು ನಮ್ಮ ಕರ್ತವ್ಯ. ಪ್ರತಿಯೊಬ್ಬ ಪೌರ ಕಾರ್ಮಿಕರಿಗೆ ತಲಾ 7 ಸಾವಿರ ರೂ. ವಿಶೇಷ ಭತ್ಯೆ ನೀಡಲು ಸಭೆ ಸರ್ವಾನುಮತದಿಂದ ಸಮ್ಮತಿಸಿತು.

ಪಟ್ಟಣದಲ್ಲಿ ಸಾಹಿತ್ಯ ಭವನ ನಿರ್ಮಾಣಕ್ಕಾಗಿ ಸಾಹಿತ್ಯ ಪರಿಷತ್ತು ನೀಡುವ ಅನುದಾನದ ಜೊತೆಗೆ ಪುರಸಭಾ ನಿಧಿ ಬಳಕೆಯ ಪ್ರಸ್ತಾಪವನ್ನು ಸಭೆ ಅಂಗೀಕರಿಸಿತು. ಪಟ್ಟಣದ ತಾಲ್ಲೂಕು ಕಚೇರಿಗೆ ಅಡ್ಡಲಾಗಿ ಸಾರ್ವಜನಿಕ ಸಮುದಾಯ ಭವನ ನಿರ್ಮಿಸಲಾಗಿದೆ. ತೆರವುಗೊಳಿಸಿ ರಸ್ತೆ ಸಂಚಾರ ಮುಕ್ತವಾಗಿಸುವ ಪ್ರಸ್ತಾಪ. ಜಿಲ್ಲಾಧಿಕಾರಿ ಬಳಿ ಪ್ರಸ್ತಾಪಕ್ಕೆ ಇರಿಸಲಾಗಿದೆ. ಅಗತ್ಯ ಕ್ರಮಕೈಗೊಳ್ಳಲಿ ಎಂದು ಸಭೆ ಯಾವುದೇ ತೀರ್ಮಾನ ಕೈಗೊಳ್ಳಲಿಲ್ಲ. ಪುರಸಭಾ ಅಧ್ಯಕ್ಷ ಎಚ್. ಕೆ.ಪ್ರಸನ್ನ, ಉಪಾಧ್ಯಕ್ಷೆ ಸಾವಿತ್ರಮ್ಮ, ಸದಸ್ಯರು ಹಾಗೂ ನಾಮನಿರ್ದೇಶಿತ ಸದಸ್ಯರು ಹಾಜರಿದ್ದರು.

# ಪ್ರಿಯಾಂಕ ಖರ್ಗೆ ನಿಂದಿಸುವವರ ಗಡಿಪಾರು ಮಾಡಿ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿರುವವರ ವಿರುದ್ಧ ಪ್ರಕರಣ ದಾಖಲಿಸಿ ಗಡಿಪಾರು ಮಾಡಬೇಕೆಂದು ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ ಸಮೀಪ ಜಮಾಯಿಸಿದ ಪ್ರತಿಭಟನಾಕಾರರು ಆರ್‌ಎಸ್‌ಎಸ್ ಹಾಗೂ ಬಿಜೆಪಿ ವಿರುದ್ಧ ಧಿಕ್ಕಾರ ಕೂಗಿದರು. ಆರ್‌ಎಸ್‌ಎಸ್ ಶಾಖೆ ನಡೆಸಲು ಸರ್ಕಾರಿ ಶಾಲಾ ಕಾಲೇಜು ಆವರಣ, ಕಚೇರಿ ಬಳಕೆಗೆ ಕಡಿವಾಣ ಹಾಕಬೇಕೆಂದು ಸಚಿವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು. ಯುವಕರಲ್ಲಿ ಕೋಮು ಭಾವನೆ ಮೂಡಿಸುವ, ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸಬೇಕೆನ್ನುವುದು ಸಚಿವ ಪ್ರಿಯಾಂಕ್ ಖರ್ಗೆ ಅವರ ಉದ್ದೇಶವಾಗಿದೆ ಎಂದರು.

ಆರ್‌ಎಸ್‌ಎಸ್ ಯಾವತ್ತಿಗೂ ರಾಷ್ಟ್ರ ಪ್ರೇಮ ಮೆರೆದಿಲ್ಲ. ಶಾಖಾ ಕಚೇರಿ ಮೇಲೆ ರಾಷ್ಟ್ರಧ್ವಜ ಹಾರಿಸದ ರಾಷ್ಟ್ರೀಯ ಸ್ವಯಂ ಸೇವಕ ಸಂಘ ದೇಶ ಪ್ರೀತಿಸುತ್ತದೆಯೆಂದು ನಂಬುವುದು ಅಸಾಧ್ಯ. ಕೋಮು ಸಂಘರ್ಷಕ್ಕೆ ಎಡೆಮಾಡಿಕೊಡುವ ಸಂಘಟನೆಯನ್ನು ರಾಜ್ಯದಲ್ಲಿ ಸಂಪೂರ್ಣವಾಗಿ ನಿಷೇಧಿಸಬೇಕು. ಸಚಿವರಿಗೆ ಭದ್ರತೆ ಒದಗಿಸಬೇಕು. ದೂರವಾಣಿ ಕರೆ, ಇ-ಮೇಲ್ ಮೂಲಕ ಜೀವ ಬೆದರಿಕೆ ಒಡ್ಡುತ್ತಿರುವ ಕೋಮುವಾದಿಗಳನ್ನು ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ಸಮಿತಿ ಅಧ್ಯಕ್ಷ ಮಲ್ಲಿಗೆವಾಳು ದೇವಪ್ಪ, ಕೆಪಿಸಿಸಿ ಸದಸ್ಯ ಹೆಚ್.ಕೆ.ಮಹೇಶ್ ರಘು ದಾಸರಕೊಪ್ಪಲು. ಸಣ್ಣಸ್ವಾಮಿ, ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು ಮತ್ತಿತರರಿದ್ದರು.

# 7 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಮನೆ ಬಳಿ ಇಟ್ಟಿದ್ದ ಕೀ ನೆರವಿನಿಂದ ಒಳನುಗ್ಗಿರುವ ಕಳ್ಳರು 7 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಗೌಡಗೆರೆ ಗ್ರಾಮದಲ್ಲಿ ನಡೆದಿದೆ.

ಸತೀಶ್‌ಕುಮಾರ್ ಹಾಗು ಪತ್ನಿ ಪುಷ್ಪ ಅವರು ಅ. 15 ರಂದು ಕಾರ್ಯನಿಮಿತ್ತ ಮನೆಗೆ ಬೀಗ ಹಾಕಿ ಕೀಯನ್ನು ಮನೆಯ ಮುಂಭಾಗ ಬಟ್ಟೆ ಹೊಲೆಯುವ ಮಿಷನ್ ಹತ್ತಿರ ಇಟ್ಟು ಚನ್ನರಾಯಪಟ್ಟಣಕ್ಕೆ ತೆರಳಿದ್ದರು. ಸ್ವಲ್ಪ ಸಮಯದ ಬಳಿಕ ವಾಪಾಸ್ ಬಂದು ನೋಡಿದಾಗ ಕೀ ಇಟ್ಟಿರುವ ಜಾಗ ಬದಲಾಗಿರುವುದು ಗೊತ್ತಾಗಿದೆ. ಕಳ್ಳತನದ ಸಂಶಯ ಬಂದು ಬೀರು ಪರಿಶೀಲಿಸಿದ್ದಾರೆ. ಬೀರು ಮುರಿದಿರುವ ಕಳ್ಳರು 20 ಸಾವಿರ ರೂ. ನಗದು, 25 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ, 20 ಗ್ರಾಂ ತೂಕದ ನೆಕ್ಲೇಸ್, 15 ಗ್ರಾಂ ತೂಕದ ಕಿವಿ ಓಲೆ ಸೆಟ್, 14 ಗ್ರಾಂ ತೂಕದ 5 ಚಿನ್ನದ ಉಂಗುರ, 8 ಗ್ರಾಂ ತೂಕದ 2 ಜೊತೆ ಓಲೆ ಕದ್ದಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಾಜಿ ಪ್ರಧಾನಿ ದೇವೇಗೌಡರ ಆರೋಗ್ಯ ವಿಚಾರಿಸಿದ ಶ್ರವಣಬೆಳಗೊಳ ಸ್ವಾಮೀಜಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಶ್ರವಣಬೆಳಗೊಳ ಮಠದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರು ಬೆಂಗಳೂರಿನಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರನ್ನು ಭೇಟಿಯಾಗಿ ಯೋಗ ಕ್ಷೇಮ ವಿಚಾರಿಸಿದರು.

ದೇವರ ಪ್ರಸಾದ, ಶ್ರೀಮಠದ ಫಲ ತಾಂಬೂಲ, ಪುಷ್ಪಮಾಲೆಯೊಂದಿಗೆ ಪದ್ಮನಾಭನಗರದಲ್ಲಿರುವ ದೇವೇಗೌಡರ ಮನೆಗೆ ತೆರಳಿದ ಅಭಿನವ ಚಾರುಶ್ರೀಗಳು, ಹೆಚ್‌ಡಿಡಿ ಅವರ ಹಣೆ ಹಾಗು ತಲೆಗೆ ತಾವೇ ಗಂಧೋದಕ ಹಚ್ಚಿ ಬೇಗ ಮೊದಲಿನಂತಾಗಿ ಎಂದು ಹರಸಿದರು.

ಈ ವೇಳೆ ದೇವೇಗೌಡರಿಗೆ ದೇವರ ಪ್ರಸಾದ ನೀಡಿ, ಅವರ ತಲೆಯ ಮೇಲೆ ಹೂ ಇಟ್ಟು, ನಿಮ್ಮ ಆಯಸ್ಸು ಮತ್ತಷ್ಟು ವೃದ್ಧಿಯಾಗಲಿ, ನಿಮ್ಮಿಂದ ಜಿಲ್ಲೆ, ನಾಡು, ದೇಶಕ್ಕೆ ಇನ್ನಷ್ಟು ಅಮೂಲ್ಯ ಸೇವೆ ದೊರಕುವಂತಾಗಲಿ. ಆ ಶಕ್ತಿಯನ್ನು ಭಗವಾನ್ ಬಾಹುಬಲಿ ಸ್ವಾಮಿ ಕರುಣಿಸಲಿ ಎಂದು ಪ್ರಾರ್ಥಿಸಿರುವುದಾಗಿ ತಿಳಿಸಿದರು. ಕೈ ಮುಗಿದು ಗುರುವಂದನೆ ಸಲ್ಲಿಸಿದ ದೇವೇಗೌಡ, ಜಿನೈಕ್ಯರಾದ ಕರ್ಮಯೋಗಿ, ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ಕೊಡುಗೆ, ಬಾಂಧವ್ಯ ಸ್ಮರಿಸಿದರು.

# ಅಧಿಕಾರಿಗಳ ಗೈರು: ಗ್ರಾಮ ಸಭೆ ಬಹಿಷ್ಕರಿಸಿದ ಹೆತ್ತೂರು ಜನರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹೆತ್ತೂರು: ಗ್ರಾಮ ಸಭೆಗೆ ಕೇವಲ ಮೂರು ಇಲಾಖೆಯ ಅಧಿಕಾರಿಗಳು ಹಾಜರಾದ್ದರಿಂದ ಜೊತೆಗೆ ಚುನಾಯಿತ ಪ್ರತಿನಿಧಿಗಳು ಬಾರದೇ ಇದ್ದರಿಂದ ಗ್ರಾಮಸ್ಥರು ಗ್ರಾಮ ಸಭೆಯನ್ನು ಬಹಿಷ್ಕರಿಸಿದ ಘಟನೆ ಹೆತ್ತೂರು ಗ್ರಾಮ ಪಂಚಾಯಿತಿಯಲ್ಲಿ ನಡೆದಿದೆ.

ಗ್ರಾಪ ಅಧ್ಯಕ್ಷ ನಾಗರಾಜ್ ಹಳ್ಳಿಬೈಲು ಅಧ್ಯಕ್ಷತೆಯಲ್ಲಿ ಗ್ರಾಮ ಸಭೆ ಹಮ್ಮಿಕೊಳ್ಳಲಾಗಿತ್ತು.

ತಾಲ್ಲೂಕಿನ ಆಡಳಿತದ 57 ಇಲಾಖೆಗೆ ಮಾಹಿತಿ ಕೊಡಲಾಗಿತ್ತು. ಆದರೆ ಕೇವಲ ಮೂರು ಇಲಾಖೆಯವರು ಮಾತ್ರ ಹಾಜರಿದ್ದು, ಗ್ರಾಮ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯ ಇಲಾಖೆಯಿಂದ ಮಾಹಿತಿ ಸಿಗುತ್ತಿಲ್ಲ, ನಮ್ಮ ಸಮಸ್ಯೆಯನ್ನು ಯಾರಿಗೆ ಹೇಳುವುದು ಯಾರಿಂದ ಮಾಹಿತಿಯನ್ನು ಪಡೆದುಕೊಳ್ಳುವುದು ಎಂದು ಎಲ್ಲ ಗ್ರಾಮಸ್ಥರು ಹಾಗೂ ಪಂಚಾಯಿತಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ನಾವು ಗ್ರಾಮ ಪಂಚಾಯಿತಿಯ ಗ್ರಾಮ ಸಭೆಯಲ್ಲಿ ರೈತರಿಗೆ ಸರ್ಕಾರದ ಇಲಾಖೆಯಿಂದ ಸಿಗುವ ಅನುಕೂಲಗಳು ಹಾಗೂ ರೈತರ ಸಮಸ್ಯೆಗಳನ್ನು ಹೇಳಿಕೊಳ್ಳಲು ವೇದಿಕೆ ಸಿಗುತ್ತದೆ ಎಂದು ಎಲ್ಲಾ ರೈತರು ತಮ್ಮ ಕೆಲಸವನ್ನು ಬಿಟ್ಟು ಗ್ರಾಮಸಭೆಗೆ ಬರುತ್ತಾರೆ. ಆದರೆ, ನಾವು ಆಯ್ಕೆ ಮಾಡಿ ಕಳುಹಿಸಿದ ಸದಸ್ಯರು, ಯಾವ ಇಲಾಖೆಯವರು ಕೂಡ ಬರದೆ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ.

ಗ್ರಾಮಗಳಲ್ಲಿ ಅನೇಕ ಸಮಸ್ಯೆಗಳಿದ್ದು ಮುಂದಿನ ದಿನಗಳಲ್ಲಿ ತಾಲೂಕು ಮಟ್ಟದ ಅಧಿಕಾರಿಗಳನ್ನು ಕರೆತಂದು ಸ್ಥಳದಲ್ಲಿ ಸಮಸ್ಯೆ ಪರಿಹರಿಸಿ ಗ್ರಾಮಸಭೆ ನಡೆಯಬೇಕೆಂದು ಸ್ಥಳೀಯ ಮುಖಂಡ ಮಹೇಶ್ ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಕೃಷಿಕ ಸಮಾಜ ನಿರ್ದೇಶಕ ಮೋಹನ್ ಕುಮಾರ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗಭೂಷಣ್, ರಕ್ಷಣಾ ವೇದಿಕೆ ರೈತ ಘಟಕ ಹೋಬಳಿ ಅಧ್ಯಕ್ಷ ಕವನಗೌಡ, ದಿವಾಕರ್, ಮೆಕ್ಕಿರಮನೆ ಕುಶಾಲಪ್ಪ, ಪಟೇಲ್ ಪ್ರೇಮಾನಂದ್, ರವಿಕುಮಾರ್ ಕಿರ್ಕಳ್ಳಿ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಅಕ್ಟೋಬರ್-19

1781: ಅಮೆರಿಕಾದ ಸ್ವಾತಂತ್ರ್ಯ ಸಮರದ ತೀರ್ಮಾನಕಾರಿ ಯುದ್ಧವಾದ ಯಾರ್ಕ್‌ಟೌನ್ ಯುದ್ಧದಲ್ಲಿ ಬ್ರಿಟಿಷ್ ಸೇನೆ ಶರಣಾದ ದಿನ. ಇದರೊಂದಿಗೆ ಅಮೆರಿಕಾ ಸ್ವಾತಂತ್ರ್ಯಕ್ಕೆ ದಾರಿ ತೆರೆದಿತು.

1812: ನೆಪೋಲಿಯನ್ ಬೊನಪಾರ್ಟ್ ರಷ್ಯಾದಿಂದ ಹಿಂತಿರುಗಲು ಆದೇಶಿಸಿದ ದಿನ. ಇದು ಫ್ರೆಂಚ್ ಸಾಮ್ರಾಜ್ಯದ ಪತನದ ಆರಂಭವಾಯಿತು.

1864: ಅಮೆರಿಕಾದ ಗೃಹಯುದ್ಧದ ಸಮಯದಲ್ಲಿ ಸೀಡರ್ ಕ್ರೀಕ್ ಯುದ್ಧ ನಡೆಯಿತು.

1933: ಜರ್ಮನಿಯು ರಾಷ್ಟ್ರಸಂಘದಿಂದ ಅಧಿಕೃತವಾಗಿ ಹೊರಬಂದಿತು.

1943: ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಜರ್ಮನಿ, ಇಟಲಿ ಹಾಗೂ ಹಂಗೇರಿ ದೇಶಗಳ ಮೇಲೆ ಮೈತ್ರಿ ರಾಷ್ಟ್ರಗಳ ಬಾಂಬ್ ದಾಳಿ.

1960: ಅಮೆರಿಕಾದಲ್ಲಿ ಮೊದಲ ಬಾರಿಗೆ ಸಿನೋ-ಸೋವಿಯತ್ ವಿಭಜನೆ ಕುರಿತು ಸಾರ್ವಜನಿಕ ಚರ್ಚೆ ಪ್ರಾರಂಭವಾಯಿತು.

2005: ಇರಾಕ್‌ನಲ್ಲಿ ಹೊಸ ಸಂವಿಧಾನಕ್ಕೆ ಜನಮತ ಸಂಗ್ರಹಣೆ ನಡೆಯಿತು.

### ಜನನ

1910: ಸುಬ್ರಹ್ಮಣ್ಯಂ ಚಂದ್ರಶೇಖರ್, ಭಾರತೀಯ ಮೂಲದ ಅಮೆರಿಕನ್ ಖಗೋಳ ಭೌತಶಾಸ್ತ್ರಜ್ಞರು, 1983ರ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿ ಪುರಸ್ಕೃತರು.

1956: ರಾಜೇಂದ್ರ ಸಿಂಗ್, ಭಾರತೀಯ ಸಾಮಾಜಿಕ ಹೋರಾಟಗಾರ

### ಮರಣ

2011: ಮುಅಮ್ಮರ್ ಗದ್ದಾಫಿ (ಲಿಬಿಯಾದ ಮಾಜಿ ಅಧ್ಯಕ್ಷ)

# ‘ತೇಜಸ್ವಿ ನನಗೆ ನಿಮಿತ್ತ’ ಭಾಷಾಂತರದ ಪುಸ್ತಕ ಬಿಡುಗಡೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಬೆಂಗಳೂರು: ಲೇಖಕ ಧನಂಜಯ ಜೀವಾಳ ಅವರ ‘ತೇಜಸ್ವಿ ನನಗೆ ನಿಮಿತ್ತ’ ಪುಸ್ತಕದ ಇಂಗ್ಲಿಷ್ ಆವೃತ್ತಿ ಪುಸ್ತಕ ಇತ್ತೀಚೆಗೆ ಬೆಂಗಳೂರಿನ ಬನಶಂಕರಿಯ ಸುಚಿತ್ರ ಫಿಲ್ಮ್ ಸೊಸೈಟಿಯಲ್ಲಿ ಬಿಡುಗಡೆಯಾಯಿತು.

ಸಾವಿರಾರು ಓದುಗರ ಮನಸೂರೆಗೊಂಡು ಟಾಪ್ ಟೆನ್ ಪುಸ್ತಕಗಳ ಪಟ್ಟಿಯಲ್ಲಿ ಹಲವಾರು ತಿಂಗಳುಗಳ ಕಾಲ ಸ್ಥಾನ ಪಡೆದಿದ್ದ ಕಾಡಿನ ಸಂತ ತೇಜಸ್ವಿಯವರ ಬದುಕಿನ ಹಲವಾರು ಮಜಲುಗಳ ಅನಾವರಣ ಮಾಡಿದ್ದ ತೇಜಸ್ವಿ ನನಗೆ ನಿಮಿತ್ತಟ ಕನ್ನಡ ಪುಸ್ತಕವನ್ನು ಇಂಗ್ಲಿಷ್ ಭಾಷೆಗೆ ಯುವ ಅನುವಾದಕಿ ಮಿಂಚು ಅವರು ತರ್ಜುಮೆ ಮಾಡಿದ್ದಾರೆ.

ಲೇಖಕ ಧನಂಜಯ ಜೀವಾಳ ಮಾತನಾಡಿ, ಓದುಗರಿದ್ದಾರೆಂಬ ಪ್ರಜ್ಞೆಯಿಂದಲೇ ಬರೆಯಬೇಕೆಂದು ಬರಹಗಾರರನ್ನು ಎಚ್ಚರಿಸುತ್ತಿದ್ದ ತೇಜಸ್ವಿ ತಮ್ಮ ವಿಭಿನ್ನ ನಿರೂಪಣಾ ಶೈಲಿಯಿಂದ ಅಪಾರ ಓದುಗ ಬಳಗವನ್ನು ಹೊಂದಿದ್ದಾರೆ. ಸಮಾಜದ ವೈವಿಧ್ಯತೆಯನ್ನು ಪ್ರಶಂಸಿಸುತ್ತಲೇ ಸಹಜವಾದ ವೈರುಧ್ಯತೆಗಳನ್ನು ಗಮನಿಸುತ್ತ ಬರಹವನ್ನು ಮಾಡಿದ್ದ ತೇಜಸ್ವಿ ಅವರು ಸಾಮರಸ್ಯದ ಕುರಿತು ಹಿಂದಿನಿಂದಲೂ ವಿಭಿನ್ನ ದೃಷ್ಟಿಕೋನ ಹೊಂದಿದ್ದರು. ಎಷ್ಟನ್ನು ನಾವು ಕಣ್ಣಿಗೆ ಕಂಡರೂ ನೋಡದೇ ಬಿಟ್ಟಿದ್ದೇವೋ ಎಂದಿರುವ ತೇಜಸ್ವಿಯವರ ಮಾತನ್ನು ನೆನಪಿಸುತ್ತಾ, ಚಿದಂಬರ ರಹಸ್ಯದ ರಫಿ-ಜಯಂತಿ ಪ್ರಕರಣ ಹಾಗು ಡೇರ್ ಡೆವಿಲ್‌ನ ರಮಾಮಣಿ-ಮುಸ್ತಫಾ ಪ್ರಕರಣವನ್ನು ಉಲ್ಲೇಖಿಸಿ, ಸರಿಸುಮಾರು ಮೂರು ತಲೆಮಾರಿನ ಆಲೋಚನೆಯನು ಪ್ರಭಾವಿಸಿದ ತೇಜಸ್ವಿ ಆನಂತರದಲ್ಲಿ ಆಗಿಹೋಗಿರುವ ಸ್ಥಿತ್ಯಂತರಗಳನು ಗಮನಿಸಿದ್ದರೆ ಬರಹದ ರೂಪದ ತಮ್ಮ ಆಲೋಚನೆಗಳನ್ನು ಬದಲಿಸಿಕೊಳ್ಳುತಿದ್ದರೇನೋ ಎಂದು ಅಭಿಪ್ರಾಯಪಟ್ಟರು.

ಲೇಖಕನ ಬರಹವು ನೂರಾರು ಓದುಗರ ಅಭಿಪ್ರಾಯವನ್ನು ರೂಪಿಸುವ ಕಾರಣ ತಾನು ಓದಿದ ಲೇಖಕನ ಬರಹವನ್ನು ಮೆಚ್ಚಬೇಕಾದಲ್ಲಿ ಮೆಚ್ಚಿ, ವಿಮರ್ಶೆ ಮಾಡಬೇಕಿದ್ದಲ್ಲಿ ವಿಮರ್ಶಿಸುವ ಸಮಚಿತ್ತತೆಯನ್ನು ವಾಚಕನು ಮೈಗೂಡಿಸಿಕೊಳ್ಳುವ ಅಗತ್ಯವಿದೆಯೆಂದರು.

ಪುಸ್ತಕ ಬಿಡುಗಡೆ ಮಾಡಿದ ಡಾ. ಗಣೇಶಯ್ಯ ಮಾತನಾಡಿ, ಕುವೆಂಪು ಅವರ ಪ್ರಭಾವಲಯದಿಂದ ಬಿಡುಗಡೆ ಹೊಂದಲೆಂದೇ ಮೂಡಿಗೆರೆಯೆಂಬ ಅಷ್ಟೇನೂ ಜಂಗುಳಿಯಿಲ್ಲದೆಡೆಯನು ಸೇರಿಕೊಂಡಿರಬಹುದು. ರಾಮಾಯಣವೆಂಬ ಪೌರಾಣಿಕ ಐತಿಹ್ಯವು ತೇಜಸ್ವಿಯವರ ಬದುಕನ್ನು ಹಂತ ಹಂತಗಳಲ್ಲೂ ಪ್ರಭಾವಿಸಿರುವುದನ್ನು ಅಯೋಧ್ಯೆ ಹೋಲುವ ಮೈಸೂರನು ತೊರೆದು, ಮೂಡಿಗೆರೆಯೆಂಬ ಮಲೆನಾಡಿನ ಮಡಿಲಿನ ವನವನ್ನು ತನ್ನ ಆವಾಸವನ್ನಾಗಿಸಿಕೊಂಡದ್ದು ಮತ್ತು ಆ ವನದ ಮುಖಾಂತರವೇ ಬದುಕನ್ನು, ಜಗತ್ತನ್ನು ಅನ್ವೇಷಿಸಿದ್ದೊಂದು ಕನ್ನಡದ ಮಟ್ಟಿಗೆ ಅಪೂರ್ವ ಪ್ರಯೋಗವೇ ಸರಿ ಎಂದು ಅವಲೋಕಿಸಿದರು. ಹಿರಿಯ ಸಾಹಿತಿ ಡಾ. ಕೆ.ಸತ್ಯನಾರಾಯಣ ಅವರು ಮಾತನಾಡಿ, ಪುಸ್ತಕದಲ್ಲಿ ಪ್ರಸ್ತಾಪವಾಗಿರುವ ತೇಜಸ್ವಿ ಹಾಗು ಮೂಲ ಲೇಖಕ ಧನಂಜಯ ಜೀವಾಳರ ನಡುವಿನ ಒಡನಾಟದ ಸಂದರ್ಭಗಳಾದ ಹ್ಯಾಂಡ್ಸ್ ಅಪ್, ಹೊಯ್ಸಳನ ಹೆಸರಿಗೆ ಮಸಿ, ವಿಸ್ಮಯ ಪ್ರತಿಷ್ಠಾನದ ಮೂಲ ಪರಿಕಲ್ಪನೆ, ನಮಸ್ಕಾರಾ ಸಾರ್, ರನ್ನಿಂಗ್ ಕಾಮೆಂಟರಿ, ಬಚಾವಾದೆ ಮಾರಾಯ, ಆಹಾ ನನ್ನ ಮದುವೆಯಂತೆ, ಭಯಾನಕ ಸತ್ಯ, ಸೂರ್ಯಂಗೇ ಟಾರ್ಚು, ಸೋಲಲೇಬೇಕಾದ ಯುದ್ಧ, ಹಿಂದಿನ ಸಾಲಿನ ಮೂಲೆಯ ಖುರ್ಚಿ, ಉಸ್ಕೋ ಪಕ್ಡೋ ಮುಂತಾದ ಬರಹಗಳನ್ನು ಸ್ವಾರಸ್ಯಕರವಾಗಿ ಪ್ರಸ್ತುತಪಡಿಸಿದರು.

ಚಿಂತಕ ಕೆ.ರಾಜಕುಮಾರ್ ಮಾತನಾಡಿ, ತೇಜಸ್ವಿಯವರನ್ನು ಪಥ ಪಂಥಗಳೆನ್ನದೆ, ಅವರನ್ನು ಹೊಸ ಓದುಗರು ಮತ್ತು ಗಂಭೀರ ಓದುಗರಿಬ್ಬರೂ ಹೊಸ ಹೊಸ ಪುಳಕಗಳಿಗಾಗಿ, ಮೋಹಕ ಕಚಗುಳಿಗಾಗಿ ಓದುತ್ತಾರೆ. ಜೀವಂತವಾದ ನುಡಿಗಟ್ಟುಗಳು, ಭಾಷಾ ಪ್ರಯೋಗದಲ್ಲಿನ ನಾವೀನ್ಯತೆ, ಆರಿಸಿಕೊಳ್ಳುವ ವಸ್ತುವಿನ ಪ್ರಸ್ತುತತೆ ಮತ್ತದರ ಗಾಂಭೀರ್ಯಗಳು ಹದ ಬೆರೆತು ಓದುಗರನ್ನು ಸೂಜಿಕಲ್ಲಿನಂತೆ ಸೆಳೆಯುತ್ತವೆ. ಹಾಗಾಗಿಯೇ ಎಲ್ಲ ಮನಸ್ಥಿತಿಯ ಓದುಗರು ತೇಜಸ್ವಿಯವರನ್ನು ಓದುತ್ತಾರೆ. ಹಾಗಾಗಿಯೇ ತೇಜಸ್ವಿಯವರು ಕನ್ನಡದ ಉಳಿದ ಲೇಖಕರಿಗಿಂತ ಭಿನ್ನವಾಗುತ್ತಾರೆ ಎಂದರು.

ಅನುವಾದಕಿ ಮಿಂಚು, ಟೋಟಲ್ ಕನ್ನಡ ಪ್ರಕಾಶನ ಸಂಸ್ಥೆಯ ಮಾಲೀಕ ಲಕ್ಷ್ಮೀಕಾಂತ್ ಮಾತನಾಡಿದರು. ಮಂಜುಳಾ ಬಾಬು ಪ್ರಾರ್ಥನೆ ನೆರವೇರಿಸಿದರು. ಜ್ಯೋತಿ ಪ್ರಶಾಂತ್ ಕಾರ್ಯಕ್ರಮ ನಿರೂಪಿಸಿದರು.


Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248